P and SC 10/2017

**ಪಿ. ಡಬ್ಲ್ಯೂ.- 2**

**ಸಾಕ್ಷಿಯು ದಿನಾಂಕಃ** 06-08-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಕೆ ಆರ್ ಪಿ., ಪರ ವಕೀಲರಿಂದಃ**

ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರುತ್ತದೆ. ಸದರಿ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ತಾಯಿ ಟಿ ಬಿ ಬೋರ್ಡ್ ನಲ್ಲಿ ಮಜದೂರ್ ಆಗಿ ಕೆಲಸ ಮಾಡುತ್ತಾರೆ ಅಂದರೆ ಸರಿ. ಸದರಿ ಕೆಲಸಕ್ಕೆ ಸೇರಿದಾಗ ಸೇವಾ ಪುಸ್ತಕದಲ್ಲಿ ತಂದೆ, ತಾಯಿ, ಗಂಡನ ಹೆಸರುಗಳನ್ನು ಬರೆಸಿರುತ್ತಾರೆ ಅಂದರೆ ಸರಿ. ಸದರಿ ಸೇವಾ ಪುಸ್ತಕದ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಅಂದರೆ ಸರಿ. ನನ್ನ ತಾಯಿಗೆ ಸೆಲ್ವಂ ಎಂಬುವವರೊಂದಿಗೆ ಮದುವೆಯಾಗಿತ್ತು ಅಂದರೆ ಸರಿಯಲ್ಲ. ನಂದಿನಿ ನನ್ನ ಅಕ್ಕ. ಸದರಿಯವರ ಪ್ರಾಥಮಿಕ ಶಾಲಾ ದಾಖಲೆಯಲ್ಲಿ ತಂದೆಯ ಹೆಸರು ಸೆಲ್ವಂ ಎಂದು ನಮೂದಾಗಿದೆ ಅಂದರೆ ಸರಿಯಲ್ಲ. ಸೆಲ್ವಂ ರವರೊಂದಿಗೆ ಚರ್ಚ್ ನಲ್ಲಿ ನನ್ನ ತಾಯಿಯ ಮದುವೆಯಾಗಿದ್ದು ಅದಕ್ಕೆ ಸಂಬಂಧಿಸಿ ದಾಖಲೆಗಳು ಇರುತ್ತವೆ ಅಂದರೆ ಸರಿಯಲ್ಲ.

ನನ್ನ ತಾಯಿಗೆ ಕಣ್ಣನ್ ರವರೊಂದಿಗೆ ಎಷ್ಟು ವರ್ಷಗಳಿಂದ ಮದುವೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಜನ್ಮ ದಿನಾಂಕಃ 18-09-1999 ಇರುತ್ತದೆ. ನನ್ನ ಅಕ್ಕಳ ಜನ್ಮ ದಿನಾಂಕಃ 05-07-1991 ಇರುತ್ತದೆ. ಕಣ್ಣನ್ ರವರ ಮದುವೆ 1 ನೇ ಎದುರುದಾರರೊಂದಿಗೆ ಮದುವೆಯಾಗಿತ್ತು ಅಂದರೆ ಸರಿಯಲ್ಲ. 1 ನೇ ಎದುರುದಾರರು ಮೃತ ಪಟ್ಟಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ.

2 ನೇ ಎದುರುದಾರರು ಅಮುದಾವಲಿಯವರ ಮಗಳು ಅಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಎದುರುದಾರರನ್ನು ನಾನು ನೋಡಿಲ್ಲ. ಈ ಪ್ರಕರಣವನ್ನು ಅಮುದಾವಲಿಯವರ ವಿರುದ್ದ ನನ್ನ ತಂದೆಯ ಮರಣಾ ನಂತರ ಸರ್ಕಾರದಿಂದ ಬರಬೇಕಾದ ಪರಿಹಾರವನ್ನು ಪಡೆಯುವ ಕಾರಣಕ್ಕೆ ದಾಖಲಿಸಿರುತ್ತೇವೆ. 1 ನೇ ಎದುರುದಾರರು ಹೊಸಪೇಟೆಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಈ ಪ್ರಕರಣಕ್ಕೂ ಮೊದಲು 2017 ರಲ್ಲಿ P and Sc ಪ್ರಕರಣ ದಾಖಲಿಸಿದ್ದು ನನಗೆ ಗೊತ್ತಿರುತ್ತದೆ. ನನ್ನ ಮತ್ತು ಇತರೆ ಅರ್ಜಿದಾರರ ವಿರುದ್ದ ಎದುರುದಾರರು ನಾವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದು ಆರೋಪಿಸಿ ಹೊಸಪೇಟೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದನ್ನು ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ವಿಚಾರಣೆಗಾಗಿ ಪೋಲಿಸರು ಠಾಣೆಗೆ ಕರೆದಾಗ ನಾನು ಹೋಗಿದ್ದೆ ಅಂದರೆ ಸರಿ. ಸದರಿ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ವಿಚಾರಣೆ ನಡೆಯುತ್ತಿದ್ದಾಗಲೇ 1 ನೇ ಎದುರುದಾರರು ಮೃತ ಪಟ್ಟರು ಅಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ., ಹೊಸಪೇಟೆ.